

## ನೋಡುತ್ತಿದ್ದ ಹಾಗೆಯೇ

ಗುಂಡ ಕತ್ತೆಯ ಮೇಲೆ ಸರಕುಗಳನ್ನು ಸಾಗಿಸುವ ಕೆಲಸ ಮಾಡುತ್ತಿದ್ದ. ಅವನ ಬಳಿ ಸ್ವಂತ ಕತ್ತೆ ಇರಲಿಲ್ಲ. ಕತ್ತೆ ಖರೀದಿಸಲು ಹಣವೂ ಇರಲಿಲ್ಲ. ಅವನು ಬ್ಯಾಂಕ್ ಮ್ಯಾನೇಜರ್ ಬಳಿ ತನ್ನ ಕಷ್ಟ ಹೇಳಿಕೊಂಡಾಗ ಅವರು ಅವನಿಗೆ ಸಾಲ ಕೊಡಿಸಿದರು. ಆರು ತಿಂಗಳ ನಂತರ ಅವರು ನಿವೃತ್ತಿಯಾದರು. ಒಂದು ದಿನ ಮ್ಯಾನೇಜರ್ ಗುಂಡ ಎದುರಿಗೆ ಬಂದಾಗ – 'ಏನಪ್ಪಾ ಗುಂಡ ಹೇಗಿದ್ದೀಯಾ? ಸಾಲದ ಕಂತನ್ನು ಸರಿಯಾಗಿ ಕಟ್ಟುತ್ತಿದ್ದೀಯಾ ಹೇಗೆ? ನನ್ನ ನೆನಪಿದೆ ತಾನೇ?' ಎಂದು ಕೇಳಿದರು.

ಅದಕ್ಕೆ ಗುಂಡ, 'ಏನು ಸಾರ್ ಹೀಗೆ ಹೇಳ್ತೀರಿ? ನಿಮ್ಮನ್ನು ಮರೆಯೋದಾ? ಪ್ರತಿ ದಿನ ಬೆಳಿಗ್ಗೆ ಕತ್ತೆಯನ್ನು ನೋಡುತ್ತಿದ್ದ ಹಾಗೆಯೇ ನಿಮ್ಮ ನೆನಪಾಗುತ್ತದೆ... ಗೊತ್ತಾ ಸಾರ್' ಎಂದ. ಮ್ಯಾನೇಜರ್ ಮೂರ್ಛೆ ಹೋಗಿದ್ದರು.

**ಎಂ.ಕೆ. ಮಂಜುನಾಥ್, ಬೆಂಗಳೂರು**

## ಆನೆ ಸಾವು

ಪ್ರಾಣಿ ಸಂಗ್ರಹಾಲಯದಲ್ಲಿ ನಂಜ ಕೆಲಸ ಮಾಡುತ್ತಿದ್ದ. ಅಲ್ಲಿ ಆನೆಯೊಂದು ಸಾವನ್ನಪ್ಪಿತ್ತು. ನಂಜ ಒಂದೇ ಸಮನೆ ಅಳುತ್ತಿದ್ದ. ಅಲ್ಲಿಗೆ ಬಂದ ಮಂಜ ಕೇಳಿದ:

'ಯಾಕೋ ನಂಜ ಅಳ್ತಿದ್ಯಾ?'

ನಂಜ ಹೇಳಿದ: 'ಆನೆ ಸತ್ತು ಹೋಯ್ತು ಕಣೋ.'

'ಅದ್ಯಕ್ಯಾಕೆ ಹೀಗೆ ಅಳ್ತಿದ್ಯಾ? ಆನೆ ಅಂದರೆ ನಿನಗೆ ಅಷ್ಟು ಇಷ್ಟಾನಾ?' ಮಂಜ ಕೇಳಿದ.

ನಂಜ ಹೇಳಿದ: 'ಇಲ್ಲ. ಆನೆ ಸಮಾಧಿ ಮಾಡೋಕೆ ಗುಂಡಿ ತೆಗೀರಿ ಅಂತ ಸಾಹೇಬ್ರು ಹೇಳಿದ್ದಾರೆ!'

**ವಿ. ಹೇಮಂತ್ ಕುಮಾರ್, ಬೆಂಗಳೂರು**

